# ಎನ್‌ಐಟಿಕೆ: 11ನೇ ಐಇಇಇ ಅಂತಾರಾಷ್ಟ್ರೀಯ ಸಮ್ಮೇಳನ

**ಸಂ.ಕ.ಸಮಾಚಾರ, ಮಂಗಳೂರು**

ಎನ್‌ಐಟಿಕೆಯ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ವಿಭಾಗವು ಆಯೋಜಿಸಿರುವ ಪವರ್ ಎಲೆಕ್ಟ್ರಾನಿಕ್ಸ್, ಡ್ರೈವ್ಸ್ ಮತ್ತು ಎನರ್ಜಿ ಸಿಸ್ಟಮ್ಸ್ (ಪಿಇಡಿಇಎಸ್) ಕುರಿತ 11ನೇ ಐಇಇಇ ಅಂತಾರಾಷ್ಟ್ರೀಯ ಸಮ್ಮೇಳನವನ್ನು ಸುರತ್ಕಲ್‌ನ ನ್ಯಾಷನಲ್ ಇನ್ ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕ (ಎನ್‌ಐಟಿಕೆ)ದಲ್ಲಿ ಉದ್ಘಾಟಿಸಲಾಯಿತು.

ಐಇಇಇ ಪೆಡೆಸ್ ಸಮ್ಮೇಳನದ ಅಧ್ಯಕ್ಷತೆಯನ್ನು ಎನ್‌ಐಟಿಕೆ ಸುರತ್ಕಲ್‌ನ ಡಾ.ಕಲ್ಪನಾ ಆರ್.ವಹಿಸಿದ್ದರು. ಸಮ್ಮೇಳನದ ಉದ್ಘಾಟನೆಯನ್ನು ಐಇಇಇ ಅಧ್ಯಕ್ಷ ಪ್ರೊ. ಮಿಲೋಸ್ ಮಾಣಿಕ್ ನೆರವೇರಿಸಿದರು.

ಗೌರವ ಅತಿಥಿ ಐಇಇಇ ಐಎಎಸ್ ಪ್ರತಿನಿಧಿ ಪ್ರೊ.ಅಕ್ಷಯ್ ಕುಮಾರ್ ರಾಥೋಡ್, ಎನ್‌ಐಟಿಕೆ ಉಪ ನಿರ್ದೇಶಕ ಪ್ರೊ.ಸುಭಾಷ್ ಸಿ.ಯರಗಲ್ ಅವರು ಎನ್‌ಐಟಿಕೆಯಲ್ಲಿ ಐಇಇಇ ಪೆಡೆಸ್ 2024 ತಂಡದ ಸಾಮಾನ್ಯ ಅಧ್ಯಕ್ಷೆ ಡಾ.ಕಲ್ಪನಾ ಆರ್., ಡಾ.ಪಿ.ಪಾರ್ಥಿಬನ್ ಮತ್ತು ಡಾ.ಬ್ರಿಜ್ ಎನ್.ಸಿಂಗ್ ಅವರನ್ನು ಅಭಿನಂದಿಸಿದರು.



Samyuktha Karnataka, Date: 21/12/24, p, 03